ಹದಿನೈದು ದಿನಗಳ ನಂತರ, ಇವತ್ತು ನಮ್ಮೊಂದಿಗೆ ವಾಕಿಂಗ್ ದಾರಿಯಲ್ಲಿ ಜೊತೆಯಾದ ಶರ್ಮಾನ ಮುಖವೇ ನಮ್ಮೊಂದಿಗೆ ಅವನು ಬಹಳಷ್ಟು ಹೇಳಲಿಕ್ಕಿದೆ ಎನ್ನುವುದನ್ನು ಬಿಂಬಿಸುತ್ತಿತ್ತು. ನಾವು ಕೂಡ ಅವನ ಮಾತುಗಳನ್ನು ಕೇಳಲು ಕಾತುರರಾಗಿದ್ದೆವು. ರೂಢಿಯಂತೆ ಈ ದಿನ ಪಾರ್ಕ್‌ನತ್ತ ಹೆಜ್ಜೆ ಹಾಕದೆ ಶರ್ಮಾನ ಸಲಹೆ ಮೇರೆಗೆ ಊರ ಹೊರಗಿನ ಗುಡ್ಡದ ಕಡೆ ನಡೆಯತೊಡಗಿದೆವು. ದಿನನಿತ್ಯದ ನಡಿಗೆಯ ಮಾರ್ಗವನ್ನು ಬದಲಾಯಿಸಿದಾಗಲೇ ಶರ್ಮಾ ಯಾವುದೋ ಗಹನವಾದ ವಿಷಯವನ್ನು ನಮ್ಮೊಂದಿಗೆ ಮಾತನಾಡಲು ಬಯಸುತ್ತಿರುವನೆಂದು ನಮಗೆಲ್ಲ ಆ ಕ್ಷಣ ಅನ್ನಿಸಿತು; ಸಹಜವಾಗಿಯೇ ಅವನ ಮಾತುಗಳನ್ನು ಕೇಳಬೇಕೆನ್ನುವ ನಮ್ಮೊಳಗಿನ ಕುತೂಹಲ ಇಮ್ಮಡಿಸಿತು. ಬೆಟ್ಟ ಹತ್ತಿ ಮಧ್ಯದಲ್ಲಿರುವ ಗಿಡದ ಕೆಳಗೆ ಕುಳಿತದ್ದೆ ಶರ್ಮಾ ಮಾತಿಗೆ ಶುರುವಿಟ್ಟುಕೊಂಡ. 'ಮೊನ್ನೆ ನನ್ನೂರಿಗೆ ಹೋದಾಗ ವಿಚಿತ್ರ ಸಂಗತಿಯೊಂದನ್ನು ಕೇಳಿದೆ. ಕೇಳಿದೆ ಅನ್ನುವುದಕ್ಕಿಂತ ಅಂಥದ್ದೊಂದು ಘಟನೆಗೆ ಸಾಕ್ಷಿಯಾದ ಮನುಷ್ಯನನ್ನು ಮುಖತಃ ಭೇಟಿ ಮಾಡಿದೆ ಅನ್ನಬಹುದೇನೋ. ನಾನು ಕೇಳಿದ ಸಂಗತಿ ನನಗೆ ಎಷ್ಟು ಆಶ್ಚರ್ಯವನ್ನುಂಟು ಮಾಡಿದೆಯೋ ಅಷ್ಟೇ ಆಶ್ಚರ್ಯ ಕೇಳಿದ ನಂತರ ನಿಮಗೂ ಆಗಲಿದೆ ಎನ್ನುವ ವಿಶ್ವಾಸ ನನಗಿದೆ. ನನ್ನಲ್ಲಿ ಆಶ್ಚರ್ಯಕ್ಕೆ ಕಾರಣನಾದ ಆ ಮನುಷ್ಯನ ಹೆಸರು ಬ್ರಹ್ಮದತ್ತ ಎಂದು. ನಾನು ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ ಎನ್ನುವುದಕ್ಕಿಂತ ಆ ಬ್ರಹ್ಮದತ್ತನೇ ನಿಮ್ಮೆದುರು ಕುಳಿತು ಹೇಳುತ್ತಿದ್ದಾನೆ ಎಂದು ನೀವು ಭಾವಿಸಿಕೊಳ್ಳಿ. ಓವರ್ ಟು ಬ್ರಹ್ಮದತ್ತ' ಎಂದು ಹೇಳಿ ಪರಕಾಯ ಪ್ರವೇಶ ಮಾಡಿದವನಂತೆ ಶರ್ಮಾ ಹೇಳಲಾರಂಭಿಸಿದ.

★★★

ಬ್ರಹ್ಮದತ್ತ ಉತ್ತರ ಭಾರತದ ಒಂದು ಹಳ್ಳಿಯವನು. ಸಾವಿಲ್ಲದ ಮನೆಯ ಸಾಸಿವೆಕಾಳು ತೆಗೆದುಕೊಂಡು ಬಾ ಎಂದು ಬುದ್ಧನಿಂದ ಉಪದೇಶ ಪಡೆದ ಕಿಸಾ ಗೌತಮಿಯ ಮನೆತನದ ಕುಡಿ ತಾನು ಎನ್ನುವ ಹೆಮ್ಮೆ ಅವನದು. ಇದಕ್ಕೆ ಪೂರಕವಾಗಿ ಅವನ ಪೂರ್ವಜರು ಸಂಗ್ರಹಿಸಿಟ್ಟ ದಾಖಲೆಗಳು ಬ್ರಹ್ಮದತ್ತನ ಬಳಿ ಇರುವುದರಿಂದ ಅವನು ಹೇಳುವ ಮಾತನ್ನು ಸುಳ್ಳು ಎನ್ನುವ ನಿರ್ಣಯಕ್ಕೆ ಬರುವುದಾಗಲೀ ಮತ್ತು ಹಾಗೆ ಹೇಳಿಕೊಳ್ಳುವುದರಿಂದ ಬ್ರಹ್ಮದತ್ತನಿಗೆ ಯಾವುದೇ ಲಾಭವಿಲ್ಲ ಎನ್ನುವುದಾಗಲೀ ಅವನನ್ನು ಬಲ್ಲವರೆಲ್ಲರಿಗೂ ಗೊತ್ತಿದೆ. ಬ್ರಹ್ಮದತ್ತ ತನ್ನ ಉನ್ನತ ಶಿಕ್ಷಣವನ್ನು ಬೆಂಗಳೂರಿನ ಪ್ರತಿಷ್ಠಿತ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಪೂರೈಸಿ ಮುಂದೆ ಕರ್ನಾಟಕದಲ್ಲೇ ನೌಕರಿಗೆ ಆಯ್ಕೆಯಾಗಿ ಇಲ್ಲೇ ನೆಲೆ ನಿಂತ. ಕಿಸಾ ಗೌತಮಿಯ ವಂಶಕ್ಕೆ ಸೇರಿದವರು ಸಾವಿಲ್ಲದ ಮನೆಯನ್ನು ಹುಡುಕುವ ತಮ್ಮ ಪ್ರಯತ್ನವನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಿಕೊಂಡು ಬರುತ್ತಿರುವರೆಂದು ಬ್ರಹ್ಮದತ್ತ ತನ್ನ ಸಹೋದ್ಯೋಗಿಗಳೆದುರು ಆಗಾಗ ಹೇಳುವಾಗ ಅವರೆಲ್ಲ ಇವನಿಗೆಲ್ಲೊ ತಲೆಕೆಟ್ಟಿರಬೇಕೆಂದು ಅವನ ಹಿಂದೆ ಮುಸಿ ಮುಸಿ ನಗುತ್ತಿದ್ದರಂತೆ. ಹಾಗೆಂದು ಅವನು ಹೇಳಿಕೊಳ್ಳುವುದನ್ನು ಬಿಟ್ಟಿರಲಿಲ್ಲ. ಬುದ್ಧನಿಂದ ಸಾವು ಅನಿವಾರ್ಯ ಎನ್ನುವ ಜ್ಞಾನೋದಯ ಕಿಸಾಗೌತಮಿಗಾಗಿದ್ದರೂ ಮನುಷ್ಯ ಸಹಜ ದೌರ್ಬಲ್ಯಗಳನ್ನು ದಾಟಲು ಅವಳ ಮುಂದಿನ ಪೀಳಿಗೆಗೆ ಸಾಧ್ಯವಾಗಿರಲಿಲ್ಲವೇನೋ. ಕಿಸಾ ಗೌತಮಿಯ ಗಂಡ ಮತ್ತು ಮೈದುನರು ಕೂಡ ಸಾವಿಲ್ಲದ ಮನೆಯನ್ನು ಹುಡುಕಲು ಸಾಕಷ್ಟು ಪ್ರಯತ್ನಿಸಿ ಯಶ ಕಾಣದೆ ಸಾವನ್ನಪ್ಪಿದರಂತೆ. ಮುಂದೆ ಆ ಕೆಲಸವನ್ನು ಅವರ ಮಕ್ಕಳು ನಂತರ ಮೊಮ್ಮಕ್ಕಳು ಆಮೇಲೆ ಮರಿಮೊಮ್ಮಕ್ಕಳು ಅದೊಂದು ಸಂಪ್ರದಾಯದಂತೆ ಪಾಲಿಸಿಕೊಂಡು ಬಂದು ಆ ಪ್ರಯತ್ನ ಬ್ರಹ್ಮದತ್ತನ ಕಾಲದವರೆಗೂ ನಿರಂತರವಾಗಿ ನಡೆದುಕೊಂಡು ಬಂದಿದೆ. ಬ್ರಹ್ಮದತ್ತ ಕೂಡ ಸಾವಿಲ್ಲದ ಮನೆಯನ್ನು ಹುಡುಕಲು ಸಾಕಷ್ಟು ಪ್ರಯತ್ನಿಸುತ್ತಿರುವಾಗಲೇ ಇಂಟರ್ನೆಟ್‌ನಲ್ಲಿ ಅವನಿಗೆ ಅಂಥದ್ದೊಂದು ಮನೆ ಮಾತ್ರವಲ್ಲ, ಊರೇ ಇರುವ ಮಾಹಿತಿ ದೊರೆತು ಅವನು ಪುಳಕಿತನಾದ. ಆ ಊರು ಕರ್ನಾಟಕದ ಪಶ್ಚಿಮ ಘಟ್ಟಗಳ